ದಿನಾಂಕ **04-08-2023** ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

:ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರ ಪರ ಶ್ರೀ.ಆರ್ ಕೆ ಕೆ ವಕೀಲರಿಂದ

ನಾನು ಈ ಅರ್ಜಿಯಲ್ಲಿ ಅರ್ಜಿದಾರಳಾಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ.

ನನ್ನ ಮತದಾನದ ಗುರುತಿನ ಚೀಟಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿ ಪಿ **1** ಎಂದು, ಹಾವೇರಿ ಗ್ರಾಮದ ರಿ.ಸ.ನಂ. **164**, ಪ್ಲಾಟ ನಂ. **33** ಕ್ಕೆ ಸಂಬಂಧಿಸಿದ ಎರಡು ಪಹಣಿಗಳ ದೃಢೀಕೃತ ನಕಲುಗಳನ್ನು ನಿ ಪಿ **2** ಮತ್ತು ನಿ ಪಿ **3** ಎಂದು, ಎದುರುದಾರರ ಗ್ಯಾರೇಜಿಗೆ ಸಂಬಂಧಿಸಿದಂತೆ **3** ಭಾವಚಿತ್ರಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ ಪಿ **4** ಎಂದು, ನನ್ನ ಮತ್ತು ಎದುರುದಾರರ ತಂದೆಯ ಮಧ್ಯ ಆದ ಮದುವೆಯ ದೃಢೀಕರಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿ ಪಿ **5** ಎಂದು ಗುರುತಿಸಲಾಯಿತು.

(ಅರ್ಜಿದಾರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್